ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕಾ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು).—

ಅ)

ಕ್ರಮ ಸಂಖ್ಯೆ	ಘಟಕದ ಹೆಸರು	ಮಂಜೂರಾದ ಸಾಲ		ಕೆ.ಎಸ್.ಐ.ಐ.ಡಿ.ಸಿ.ಯಿಂದ ಈಕ್ವಿಟಿ.
		ಕೆ.ಎಸ್.ಎಫ್.ಸಿ.	ಕೆ.ಎಸ್.ಐ.ಐ.ಡಿ.ಸಿ.	
		ಲಕ್ಷ ರೂಪಾಯಿಗಳು		
೧	೨	೩	೪	೫
೧	ಮೆ॥ ವಾಸ್ತುಪೂಜಾ ಸಿಮೆಂಟ್ಸ್ ಅಂಡ್ ಅಲೈಡ್ ಕೆಮಿಕಲ್ಸ್ (ಪ್ರೈ) ಲಿಮಿಟೆಡ್	೬೦.೦೦	೯೦.೦೦	...
೨	ಮೆ॥ ಚೆನ್ನಗಿರಿ ಸಿಮೆಂಟ್ಸ್ (ಪ್ರೈ) ಲಿಮಿಟೆಡ್	೪೯.೪೧	...	
೩	ಮೆ॥ ಮಹಾವೀರ ಸಿಲಿಕಾನ್ಸ್ ಮುದೋಳ ತಾಲ್ಲೂಕು	೬೦.೦೦	೯೦.೦೦	...
೪	ಮೆ॥ ಲೋಕಾಪುರ ಸಿಮೆಂಟ್ಸ್ (ಪ್ರೈ) ಲಿಮಿಟೆಡ್	೨೪.೬೦	೪೯.೦೦	...
೫	ಮೆ॥ ಕ್ವಾಲಿಟಿ ಸಿಮೆಂಟ್ಸ್	...	...	೨೯.೦೦
	ಒಟ್ಟು	೧೯೪.೪೦	೨೬೯.೦೦	೨೯.೦೦

ಆ) ಮೆ॥ ವಾಸ್ತುಪೂಜಾ ಸಿಮೆಂಟ್ಸ್ ಅಲೈಡ್ ಕೆಮಿಕಲ್ಸ್ (ಪ್ರೈ) ಲಿ. — ಆಸಲಿನ ಕಂತುಗಳ ಮರು ಪಾವತಿ ಇನ್ನು ಪ್ರಾರಂಭವಾಗಲಿಲ್ಲ ಅವಕಾಶವಿದೆ. ಬಾಕಿಯ ಕಂತುಗಳು ಸರಿಯಾಗಿ ಮರು ಪಾವತಿ ಆಗುತ್ತಿದೆ.

೨ ಚೆನ್ನಗಿರಿ ಸಿಮೆಂಟ್ಸ್ (ಪ್ರೈ) ಲಿಮಿಟೆಡ್
೩ ಮಹಾವೀರ ಸಿಲಿಕಾನ್ಸ್ — ಇನ್ನು ಸಾಲ ವಿತರಣೆ ಆಗಿಲ್ಲ

೪ ಲೋಕಾಪುರ ಸಿಮೆಂಟ್ಸ್ (ಪ್ರೈ) ಲಿಮಿಟೆಡ್ — ಸರಿಯಾಗಿ ಮರು ಪಾವತಿ ಆಗುತ್ತಿದೆ.

ಇ) ಉದ್ಭವಿಸುವುದಿಲ್ಲ.

ಬೆಂಗಳೂರಿನಲ್ಲಿರುವ ಮೈಸೂರು ಮೆಷಿನರಿ ಮ್ಯಾನ್ಯುಫ್ಯಾಕ್ಚರಿಂಗ್ ಕಾರ್ಖಾನೆಯ ಕೆಲಸ ಸ್ಥಗಿತಗೊಂಡಿರುವುದು.

೧೪೯೧. ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಕಂದಾಯ, ಯೋಜನಾ ಮತ್ತು ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರಿನಲ್ಲಿರುವ ಮೈಸೂರು ಮೆಷಿನರಿ ಮ್ಯಾನ್ಯುಫ್ಯಾಕ್ಚರಿಂಗ್ ಕಾರ್ಖಾನೆಯನ್ನು ಬೀಗಮುದ್ರೆ/ಮುಚ್ಚುವಿಕೆ/ಕೆಲಸ ಸ್ಥಗಿತಗೊಳಿಸಿದ್ದಾರೆಯೇ ?

ಆ) ಹಾಗಿದ್ದಲ್ಲಿ ಎಂದಿನಿಂದ ಮತ್ತು ಯಾವ ಕಾರಣಗಳಿಗಾಗಿ ?

ಇ) ಈಗ ಬೀಗ ಮುದ್ರೆ/ಮುಂಚ್ಚುವಿಕೆ/ಕೆಲಸ ಸ್ಥಗಿತಕ್ಕೆ ಸರ್ಕಾರದ ಅನುಮತಿ ಬೇಡವೇ ? ಹಾಗೂ ಅನುಮತಿಯನ್ನು ನೀಡಲಾಗಿದೆಯೇ ?

ಈ) ಈ ಕಾರ್ಖಾನೆಯನ್ನು ಪ್ರಾರಂಭಿಸಿ ಎಲ್ಲರಿಗೂ ಕೆಲಸ ಸಿಗುವಂತಾಗಲು ಸರ್ಕಾರವು ಕೈಗೊಂಡಿರುವ ಕಾರ್ಯಕ್ರಮಗಳಾದರೂ ಏನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನಾ ಮತ್ತು ಕಾರ್ಮಿಕ ಸಚಿವರು).—

ಆ) ದಿನಾಂಕ ೫-೧೧-೧೯೮೬ ರಿಂದ ಉತ್ಪಾದನಾ ಕ್ರಿಯೆಯನ್ನು ಆಡಳಿತ ವರ್ಗದವರು ತಡೆ ಹಿಡಿದು ಕಾರ್ಖಾನೆಯ ಕೆಲಸ ನಡೆಯುತ್ತಿಲ್ಲ.

ಆ) ೫-೧೧-೧೯೮೬ ರಿಂದ ಉತ್ಪಾದನಾ ಕ್ರಿಯೆ ನಿಂತಿದೆ. ಲೇ-ಆಫ್ ಮುಂದುವರೆಸಲು ಕೆಲಸಗಾರರು ಒಪ್ಪದೆ ಹೋದುದರಿಂದ ಮತ್ತು ಕೆಲಸಗಾರರು ಒಳಗೆ ನುಗ್ಗಿದರು ಎಂಬ ಕಾರಣ ಕೊಟ್ಟು ಉತ್ಪಾದನಾ ಕ್ರಿಯೆಯನ್ನು ನಿಲ್ಲಿಸಿದ್ದಾರೆ.

ಇ) ಬೀಗಮುದ್ರೆಗೆ ಸರ್ಕಾರದ ಅನುಮತಿ ಆಗತ್ಯವಿಲ್ಲ.

ಈ) ಉತ್ಪಾದನಾ ಕ್ರಿಯೆಯನ್ನು ತಡೆಹಿಡಿದಿರುವ ಆಡಳಿತ ವರ್ಗದವರ ಕ್ರಮ ಬೀಗ ಮುದ್ರೆ ಎಂದು ಪರಿಗಣಿಸಿ ಸರ್ಕಾರ ಬೀಗ ಮುದ್ರೆಯ ಮುಂದುವರಿಕೆಯನ್ನು ನಿಷೇಧಿಸಲಾಗಿದೆ. ಆದರೂ ಬೀಗ ಮುದ್ರೆ ತೆರವಾಗಿಲ್ಲ. ಈ ಬಗ್ಗೆ ಮುಂದಿನ ಕ್ರಮವನ್ನು ಆಡಳಿತ ವರ್ಗದವರ ಮೇಲೆ ತೆಗೆದು ಕೊಳ್ಳಲಾಗುವುದು.

ವಿದ್ಯುತ್ ಸರಬರಾಜಿನಲ್ಲಿ ಆಗುತ್ತಿರುವ ನಷ್ಟ .

೨೦೬೩. (ಡಿ). ಶ್ರೀ ಎನ್. ಎಸ್. ಖೇಡ್ (ಇಂಡಿ).—ಮಾನ್ಯ ಕೈಗಾರಿಕೆ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಆ) ರಾಜ್ಯದಲ್ಲಿ ವಿದ್ಯುತ್ ಸರಬರಾಜಿನಲ್ಲಿ ಆದ ಶಕ್ತಿಯ ನಷ್ಟವೆಷ್ಟು? ಎಷ್ಟು ಪ್ರತಿ ಶತ ?

ಬ) ಈ ನಷ್ಟದಲ್ಲಿ ಪೋಲಾದ ನಷ್ಟವೆಷ್ಟು ? ಹಾಗೂ ಲಾಯಿನ್ ನಷ್ಟವೆಷ್ಟು ?

ಇ) ಈ ನಷ್ಟವನ್ನು ಕಡಿಮೆಗೊಳಿಸಲು ಏನು ಕ್ರಮ ಕೈಗೊಳ್ಳಲಾಗಿದೆ ?

ಈ) ಲಾಯಿನ್ ನಷ್ಟಕ್ಕೆ ಪರ್ಯಾಯವಾಗಿ ಏನಾದರೂ ಮಾರ್ಪಾಡುಗಳ ಯೋಜನೆಯನ್ನು ಮಾಡಲಾಗಿದೆಯೇ ?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕೆ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು),—

ಆ) ರಾಜ್ಯದಲ್ಲಿ ೧೯೮೪-೮೫ ಮತ್ತು ೧೯೮೫-೮೬ರಲ್ಲಿ ವಿದ್ಯುತ್ ಪ್ರಸಾರಣಾ ಮತ್ತು ವಿತರಣಾ ವ್ಯವಸ್ಥೆಯಲ್ಲುಂಟಾದ ವಿದ್ಯುತ್ ನಷ್ಟ ಈ ರೀತಿ ಇದೆ.

ವರ್ಷ	ನಷ್ಟ ದಶಲಕ್ಷ ಯೂನಿಟ್ಟುಗಳಲ್ಲಿ	ಶೇಕಡ ನಷ್ಟ
೧	೨	೩
೧೯೮೪-೮೫	೨೨೭೭	೨೨.೦೦
೧೯೮೫-೮೬	೨೦೯೫	೨೧.೪೦ (ತಾತ್ಕಾಲಿಕ)